**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 84/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.02**
**ದಿನಾಂಕಃ 16.07.2025** **ಸಿಡಬ್ಲ್ಯೂ.04**

| | |
|---|---|
| ಹೆಸರು | ಹಳ್ಳಿ ಮಹಾಂತೇಶ |
| ತಂದೆ ಹೆಸರು | ಹಳ್ಳಿ ಶಿವಲಿಂಗಪ್ಪ |
| ವಯಸ್ಸು | 37 ವರ್ಷ |
| ಉದ್ಯೋಗ | ಹೆಚ್ ಸಿ , ಸಂಚಾರ ಪೋಲಿಸ್ ಠಾಣೆ |
| ವಾಸ ಸ್ಥಳ | ದಾವಣಗೆರೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಸನ್ 2017 ರಿಂದ 2023 ರವರೆಗೆ ಸಿ ಪಿ ಸಿ ಆಗಿ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15.10.2022 ರಂದು ಠಾಣೆಯಲ್ಲಿದ್ದಾಗ ಚಾಸಾ. 15 ರವರು ನನಗೂ ಹಾಗೂ ಚಾಸಾ.5 ರವರಿಗೂ ಗ್ರಾಮಾಂತರ ಠಾಣೆ ಹತ್ತಿರ ಸಾರ್ವಜನಿಕರ ಪಡಿತರ ರಾಗಿಯನ್ನು ಕಾನೂನು ಬಾಹಿರವಾಗಿ ಸಾಗಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ ಮೇರೆಗೆ ಠಾಣಾ ಗುನ್ನೆ ನಂ. 157/2022 ರಂತೆ ಪ್ರಕರಣ ದಾಖಾಗಿದ್ದು ನಾವುಗಳು ನೊಟಿಸ್ ಮೂಲಕ ಪಂಚರನ್ನು ಬರುಮಾಡಿಕೊಂಡು ಚಾಸಾ.1 ರವರನ್ನು ಬರಮಾಡಿಕೊಂಡು ಇಲಾಖಾ ಜೀಪಿನಲ್ಲಿ ಕೆಎ/17 ಜಿ 475 ನೇ ವಾಹನದಲ್ಲಿ ನಾವುಗಳು ಸದರಿ ಸ್ಥಳಕ್ಕೆ ಸಂಜೆ 7.30 ಗಂಟೆಗೆ ಹೋದೆವು. ನಾವುಗಳು ಸ್ಥಳದಲ್ಲಿ ಕಾಯುತ್ತಿರುವಾಗ ಒಬ್ಬ ಆಸಾಮಿ ಕೆಎ/17 5009 ನೇ ತನ್ನ ಬೈಕಿನಲ್ಲಿ ಬಂದಿದ್ದು ಸದರಿ ಬೈಕನಲ್ಲಿ ಬಾಯಿ ಕಟ್ಟಿ ಹೊಲೆದ 4 ಪ್ಲಾಸ್ಟಿಕ್ ಚೀಲಗಳು ಇದ್ದವು. ಸದರಿ ಆಸಾಮಿಯನ್ನು ವಿಚಾರಿಸಲಸಗಿ ಪ್ಲಾಸ್ಟಿಕ್ ಚೀಲದಲ್ಲಿ ಪಡಿತರ ರಾಗಿಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ತಿಳಿದಿದ್ದು ಸದರಿ ಆತನ ಹೆಸರು ವಿಳಾಸ ಕೇಳಲಾಗಿ ವೆಂಕಟೇಶ ನಾಯ್ಕ ತಂದೆ ಪರಮೇಶ, 28 ವರ್ಷ, ದಾವಣಗೆರೆ ಎಂದು ತಿಳಿಸಿರುತ್ತಾನೆ. ನಂತರ ನಾವುಗಳು ಚಾಸಾ.1 ರವರು ತಂದಿದ್ದ ಎಲ್ಕ್ಟ್ರಿಕ್ ತೂಕದ ಯಂತ್ರದೊಂದಿಗೆ ಚಾಸಾ.2 ಮತ್ತು 3 ರವರ ಸಹಾಯದಿಂದ ಬೈಕನಲ್ಲಿದ್ದ ಚೀಲಗಳನ್ನು ಕ್ರಮವಾಗಿ ತೂಕ ಮಾಡಲಾಗಿ 1 ನೇ ಚೀಲದಲ್ಲಿ 40 ಕೆಜಿ, 100 ಗ್ರಾಂ ತೂಕದ ರಾಗಿ ಇದ್ದು, ಚೀಲವು ಬಿಳಿ ಬಣ್ಣದ ವೆಂಕೀಸ್ ರಾಯಲ್ ಕಂಪನಿಯದಾಗಿತ್ತು. 2 ನೇ ಚೀಲದಲ್ಲಿ 40 ಕೆಜಿ, 150 ಗ್ರಾಂ ತೂಕದ ರಾಗಿ ಇದ್ದು, ಬಿಳಿ ಬಣ್ಣದ ವೆಂಕೀಸ್ ರಾಯಲ್ ಕಂಪನಿಯದಾಗಿತ್ತು. 3 ನೇ ಚೀಲದಲ್ಲಿ 40 ಕೆಜಿ ತೂಕದ ರಾಗಿ ಇದ್ದು,ಬಿಳಿ ಬಣ್ಣದ ವೆಂಕೀಸ್ ರಾಯಲ್ ಕಂಪನಿಯದಾಗಿತ್ತು. 4 ನೇ ಚೀಲದಲ್ಲಿ 25 ಕೆಜಿ ತೂಕದ ರಾಗಿ ಇದ್ದು, ಬಿಳಿ ಬಣ್ಣದ ಜುಂಕ್ ಶುಗರ್ ಕಂಪನಿಯದಾಗಿತ್ತು. ಒಟ್ಟು ರಾಗಿಯ 145 ಕೆಜಿಯಾಗಿತ್ತು. ಸದರಿ ರಾಗಿಯ ಮಾರುಕಟ್ಟೆ ಬೆಲೆ 2,175/- ರೂ ಆಗಿರಬಹುದು. ನಂತರ ರಾಗಿಯನ್ನು ಪರೀಕ್ಷೆಗಾಗೆ ಕಳುಹಿಸುವ

ಸಲುವಾಗಿ ಪ್ರತಿಯೊಂದು ಚೀಲದಿಂದ 1 ಕೆಜಿಯಷ್ಟು ರಾಗಿಯನ್ನು ತೆಗೆದುಕೊಂಡು ಪ್ರತ್ಯೇಕವಾಗಿ 4 ಬಿಳಿ ಬಣ್ಣದ ಬಟ್ಟೆ ಚೀಲಗಳಲ್ಲಿ ಹಾಕಿ ಅರಗಿನಿಂದ ಶೀಲ್ ಮಾಡಿ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ಸದರಿ ಮಾಲು ಮತ್ತು ಆರೋಪಿಯನ್ನು ಚಾಸಾ.15 ರವರು ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಮಾಲು ಮತ್ತು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಆರೋಪಿ ಹಾಜರಿದ್ದಾರೆ. ಸಾಕ್ಷಿಯು ಗುರುತಿಸಿದ ಮಾದರಿ 4 ರಾಗಿ ಚೀಲಗಳನ್ನು ಒಟ್ಟಾಗಿ ಈಗಾಗಲೇ ಮು.ಮಾ 1 ಎಂದು ಗುರುತಿಸಲಾಗಿದೆ. ಈ ಎಲ್ಲಾ ವಿಚಾರವಾಗಿ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಬಿ ವಕೀಲರಿಂದಃ**

ಚೀಲಗಳ ಬಾಯಿ ಕಟ್ಟುವುದು ಎಂದರೆ ಬೇರೆ ಹಾಗೂ ಚೀಲಗಳ ಬಾಯಿ ಹೊಲೆಯುವುದು ಎಂದರೆ ಬೇರೆ ಎಂದರೆ ಸರಿ. ಬಿಳಿ ಬಟ್ಟೆ ಚೀಲ ಎಂದರೆ ಬೇರೆ ಹಾಗೂ ಬಿಳಿ ಬಟ್ಟೆ ಚೀಲಗಳು ಎಂದರೆ ಬೇರೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಹೇಳಿರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಮಾದರಿಗಾಗಿ ಪಡೆದ ರಾಗಿಯನ್ನು ಬಿಳಿ ಬಟ್ಟೆ ಚೀಲದಲ್ಲಿ ಕಟ್ಟಿರುತ್ತೇವೆ ಎಂದು ನಮೂದು ಇದೆ ಎಂದರೆ ಸರಿ. ನನ್ನ ಸಾಕ್ಷ್ಯದಲ್ಲಿ ಹೇಳಿದಂತೆ 4 ಚೀಲಗಳ ಒಟ್ಟು ತೂಕ 145 ಕೆಜಿ 250 ಗ್ರಾಂ ಆಗುತ್ತದೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ 145 ಕೆಜಿ ಮಾತ್ರ ಎಂದು ನಮೂದು ಇದೆ ಎಂದರೆ ಸರಿ.

ಪಂಚರಿಗೆ ನೋಟಿಸ ಯಾರು ಜಾರಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಿಸಿ – 406 ನಾನೇ ಎಂದರೆ ಸರಿ. ಈ ಪ್ರಕರಣದಲ್ಲಿ ಪಂಚರಿಗೆ ನೋಟಿಸನ್ನು ಪಿಸಿ –406 ರವರ ಮೂಲಕ ನೀಡಲಾಗಿದೆ ಎಂದು ನೋಟಿಸನಲ್ಲಿ ಹೇಳಿದ್ದಾರೆ ಎಂದರೆ ಸರಿ. ಪಂಚರಿಗೆ ನೀಡಿದ ನೋಟಿಸನಲ್ಲಿ ಪಂಚರು ಯಾವ ಸಮಯಕ್ಕೆ ಎಲ್ಲಿ ಹಾಜರು ಇರಬೇಕು ಎಂದು ನಮೂದು ಇಲ್ಲ ಎಂದರೆ ಸರಿ. ನನ್ನನ್ನು ಮತ್ತು ಚಾಸಾ.5 ರವರನ್ನು, ಚಾಸಾ.15 ರವರು ಯಾವ ಸಮಯಕ್ಕೆ ಕರೆದಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

ಚಾಸಾ.1 ರವರು ತಂದಿದ್ದ ಎಲೆಕ್ಟ್ರಿಕ್ ಯಂತ್ರ ಯಾವ ಕಂಪನಿಯದ್ದು ಮತ್ತು ಎಲ್ಲಿಂದ ತಂದರು ಎಂದು ನನಗೆ ಮಾಹಿತಿ ಇಲ್ಲ. ಆರೋಪಿ ಸ್ಥಳದಲ್ಲಿ ಯಾವ ದಿಕ್ಕಿನಿಂದ ಬಂದನು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಚಾಸಾ.15 ರವರು ಸ್ಥಳದಲ್ಲಿ ಆರೋಪಿಯ ಹೇಳಿಕೆಯನ್ನು ಪಡೆದಿರುತ್ತಾರೆ.

ಸಾಮಾನ್ಯವಾಗಿ ಒಂದೇ ಜಾತಿಯ ರಾಗಿ ತಳಿ ಇರುತ್ತದೆ ಎಂದರೆ ಸರಿ. ಚೀಲಗಳಿಂದ ರಾಗಿಯನ್ನು ಯಾವುದರ ಸಹಾಯದಿಂದ ತೆಗೆದಿರುತ್ತೇವೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಕೊಂಡಿಲ್ಲ ಎಂದರೆ ಸರಿ. ಸೀಲ್ ಮಾಡಲು ಉಪಯೋಗಿಸಿದ ವಸ್ತುಗಳನ್ನು ಯಾರು ಎಲ್ಲಿಂದ ತಂದಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಕೊಂಡಿಲ್ಲ ಎಂದರೆ ಸರಿ. ನಾನು ಪಂಚನಾಮೆಗೆ ಸಹಿ ಮಾಡಿಲ್ಲ ಎಂದರೆ ಸರಿ. ಪಂಚನಾಮೆ ಮಾಡಿದ ಬಗ್ಗೆ ಸಹ ನನ್ನ ಹೇಳಿಕೆಯಲ್ಲಿ ಹೇಳಿಕೊಂಡಿಲ್ಲ ಎಂದರೆ ಸರಿ.

ಸ್ಥಳದಲ್ಲಿ ಆರೋಪಿಗೆ ನೋಟಿಸ್ ಜಾರಿ ಮಾಡಿಲ್ಲ ಎಂದರೆ ಸರಿ. ಅಮಾನತು ಪಡಿಸಿಕೊಂಡ ಮಾಲನ್ನು ಯಾವ ರೀತಿ ಠಾಣೆಗೆ ತರಲಾಯಿತು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಎಲೆಕ್ಟ್ರಿಕ ಯಂತ್ರದ ನಮೂನೆಯನ್ನು ಮತ್ತು ಅದಕ್ಕೆ ನೀಡಬೇಕಾದ ವಿದ್ಯುತ್ ಯಂತ್ರದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಮು.ಮಾ ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 4 ಚೀಲಗಳ ಮೇಲೆ ಇದ್ದ ಬರವಣಿಗೆ ಯಾವ ಭಾಷೆ ಮತ್ತು ಶಾಹಿಯಲ್ಲಿತ್ತು ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ಇಂಗ್ಲೀಷ ಭಾಷೆಯಲ್ಲಿತ್ತು ಎಂದು ನುಡಿಯುತ್ತಾರೆ. 4 ಪ್ಲಾಸ್ಟಿಕ ಚೀಲಗಳಲ್ಲಿ ಉದ್ದ ಮತ್ತು ಅಗಲದ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಮು.ಮಾ ಗಳ ಮೇಲೆ ನನ್ನ ಸಹಿವುಳ್ಳ ಚೀಟಿ ಇಲ್ಲ ಎಂದರೆ ಸರಿ. ಸ್ಥಳದಲ್ಲಿ ಆರೋಪಿಯನ್ನು ದಸ್ತುಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಸ್ಥಳದಲ್ಲಿ ಬೈಕ್ ಮೇಲೆ ರಾಗಿ ಚೀಲಗಳನ್ನು ತೆಗೆದುಕೊಂಡು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವ ರೀತಿ ಕಾಯುತ್ತಿದ್ದೆವು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಮಫ್ತಿನಲ್ಲಿ ಹೋಗಿದ್ದೆ ಅಥವಾ ಸಮವಸ್ತ್ರದಲ್ಲಿ ಹೋಗಿದ್ದೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಅದೇ ರೀತಿ ಸ್ಥಳದಲ್ಲಿ ಯಾವ ಯಾವ ಚೀಲಗಳನ್ನು ಯಾರು ಯಾರು ಪರಿಶೀಲನೆ ಮಾಡಿದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ